# ಪಾಪ ಗೊತ್ತಿರಲಿಲ್ಲ

ಭೂಗೋಳವನ್ನು ಭೂಮಧ್ಯರೇಖೆಯಗುಂಟ
ಸೀಳಿದರೆ ಎರಡು ಗೋಳಾರ್ಧಗಳು;
ಅವುಗಳನ್ನು ಬೋಗುಣಿಗಳಂತೆ ಒಂದರೊಳಗೊಂದಿಡುವ ಮುಂಚೆ
ಪ್ಯಾರಿಸಿನ ಐಫೆಲ್ ಟವರಿದೆಯಲ್ಲ, ಅದನ್ನು ಕತ್ತರಿಸಿಬಿಡಬೇಕು;
ಇಲ್ಲದಿದ್ದರೆ ಪಂಕ್ಚರಾದೀತು ಆಸ್ಟ್ರೇಲಿಯಾದ ಮರುಭೂಮಿ;
ಸತ್ತರೇನು ಭೂಮಂಡಲದ ಅರ್ಧದಷ್ಟು ಮಂದಿ
ಇರುತ್ತಾರಲ್ಲ ಆಹಾ! ಎಂಥ ಸಾಧನೆ ಎಂದು ಬೀಗುವ ಇನ್ನರ್ಧದಷ್ಟು ಜನ
ಎಂದೆಲ್ಲ ಬರೆದ ಕವಿ ಆಂದ್ರೇಯಿ
ವೋೞ್ನೆಸೆನ್ಸ್ಕಿಗೆ

ಕುತುಬ್‌ಮಿನಾರ್ ಬಿಡಿ, ನಮ್ಮ ಸರ್ದಾರ್
ಪಟೇಲರೊಬ್ಬರೇ ತಲೆಯೆತ್ತಿದರೆ
ಯಾವ ಗೋಳಾರ್ಧದ ಯಾವ ಭಾಗಕ್ಕೆ ಜಖಂ
ಆಗಬಹುದೆಂದು
ಪಾಪ ಗೊತ್ತಿರಲಿಲ್ಲ

